10. Byadgi	nil
11. Hirekerur	nil
12. Nargund	nil
13. Ranibennur	7,38,309
14. Gadag	2,87,969
15. Navalgunda	47,808
16. Ron	1,30,657
17. Mundargi	2,11,994
Total	22,28,500

ತುಂಗಾ ಮೇಲ್ದಂಡೆ ಯೋಜನೆ

2771 - ಶ್ರೀ ಮಂಜುನಾಥ್ ಸಿ. ಕುನ್ನೂರ (ಶಿಗ್ಗಾಂವ) : ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಮಂತ್ರಿಗಳು ಈ ಕೆಳಕಂಡ ಪಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುಂಗಾ ಮೇಲ್ದಂಡೆ ಯೋಜನೆ ಜಾರಿ ಅವಶ್ಯಕವಾದುದರಿಂದ ಈ ವಿಷಯವು ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆಯೇ?

ಆ) ಹಾಗಿದ್ದಲ್ಲಿ ಮಾಲತಿ ಜಲಾನಯನವನ್ನು ಒಳಗೊಂಡ ಯೋಜನೆ ತಯಾರಾಗಿದೆಯೇ?

ಇ) ತುಂಗಾ ಮೇಲ್ದಂಡೆ ಯೋಜನೆ ಮಾಲತಿ ಜಲಾನಯನವನ್ನು ಒಳಗೊಂಡು ಜಾರಿಗೆ ತಂದಲ್ಲಿ ಧಾರವಾಡ ಜಿಲ್ಲೆಯ ಎಷ್ಟು ತಾಲ್ಲೂಕುಗಳಿಗೆ ಅನುಕೂಲವಾಗುವುದು?

ಈ) ತುಂಗಾ ಮೇಲ್ದಂಡೆ ಯೋಜನೆ ಮತ್ತು ಮಾಲತಿ ಜಲಾನಯನವನ್ನು ಒಳಗೊಂಡ ಯೋಜನಾ ವರದಿ ತಯಾರು ಮಾಡಲಾಗಿದೆಯೇ ಹಾಗಿದ್ದಲ್ಲಿ ಅದರಿಂದ ಎಷ್ಟು ಎಕರೆ ನೀರಾವರಿ ಸೌಲಭ್ಯ . ಸಿಗುತ್ತದೆ ಮತ್ತು ಹಣ ಖರ್ಚು ಆಗುವುದರ ವಿವರ ನೀಡುವುದು?

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಭಾರಿ ಮತ್ತು ಮಧ್ಯಮ ನೀರಾವರಿ ಮಂತ್ರಿಗಳು):

ಅ) ಇದೆ.

ಆ) ಮಾಲತಿ ಜಲಾಶಯ ಯೋಜನೆಯನ್ನು ಹೊರತುಪಡಿಸಿ ಯೋಜನೆಯನ್ನು ರೂಪಿಸಲಾಗಿದೆ.

ಈ) (ಆ) ಪ್ರಶ್ನೆಗೆ ನೀಡಿರುವ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಕನಕದಾಸರ ಜಯಂತೋತ್ಸವ ಪ್ರಾರಂಭಗೊಂಡ ಸಮಾರಂಭವನ್ನು ಮುಕ್ತಾಯ ಗೊಳಿಸುವುದು

2583 - ಶ್ರೀ ಎಚ್. ವಿಶ್ವನಾಥ್ (ಕೆ.ಆರ್. ನಗರ) : ಮಾನ್ಯ ಯುವಜನ ಸೇವಾ ಕ್ರೀಡಾ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?